ಸಂಖ್ಯೆ: ಇಎಸ್‌ಟಿ(1)177/2008-09

ಜಿಲ್ಲಾಧಿಕಾರಿಗಳ ಕಛೇರಿ,
ಮಂಡ್ಯ ಜಿಲ್ಲೆ,
ಮಂಡ್ಯ ದಿನಾಂಕ: 30-11-2009

## ಪ್ರಕಟಣೆ

ವಿಷಯ: ಮಂಡ್ಯ ಜಿಲ್ಲಾ ಕಂದಾಯ ಘಟಕದ ಗ್ರಾಮಲೆಕ್ಕಿಗರ ನೇರನೇಮಕಾತಿ ಸಂಬಂಧ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಿಸುವ ಕುರಿತು.

ಉಲ್ಲೇಖ: 1.ಈ ಕಛೇರಿಯ ಸಮ ಸಂಖ್ಯೆ ಅಧಿಸೂಚನೆ ದಿನಾಂಕ: 26.9.2009
2.ಈ ಕಛೇರಿಯ ಸಮ ಸಂಖ್ಯೆ ತಿದ್ದುಪಡಿ ಅಧಿಸೂಚನೆ ದಿನಾಂಕ: 1.10.2009

@@@

ಮಂಡ್ಯ ಜಿಲ್ಲಾ ಕಂದಾಯ ಘಟಕದಲ್ಲಿ ಖಾಲಿಯಿರುವ ಗ್ರಾಮಲೆಕ್ಕಿಗರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಹೊರಡಿಸಲಾದ ಉಲ್ಲೇಖಿತ ಅಧಿಸೂಚನೆ ಮತ್ತು ತಿದ್ದುಪಡಿ ಅಧಿಸೂಚನೆಗಳ ರೀತ್ಯಾ ಅರ್ಜಿಗಳನ್ನು ಆಹ್ವಾನಿಸಿದ್ದರ ಮೇರೆಗೆ ನಿಗಧಿತ ಅವಧಿಯಲ್ಲಿ ಅಂದರೆ ದಿನಾಂಕ: 30.10.2009 ರ ಒಳಗೆ ಸ್ವೀಕೃತವಾದ Online 5573 ಮತ್ತು offline 2339 ಒಟ್ಟು 7912 ಅರ್ಜಿಗಳಲ್ಲಿ ಸಾಮಾನ್ಯ ಮತ್ತು ಇತರೆ ಮೀಸಲಾತಿ ವರ್ಗಗಳಲ್ಲಿ ನೇಮಕಾತಿ ಆಯ್ಕೆಗೆ ಅರ್ಹವಾದ ಅಭ್ಯರ್ಥಿಗಳ ದಾಖಲಾತಿಗಳ ಪರಿಶೀಲನೆಗಾಗಿ 1:1 ಪ್ರಮಾಣದಲ್ಲಿ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಹಾಗೂ ಶೇ.50 ರಷ್ಟು ಕಾಯ್ದಿರಿಸಿದ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಈ ಮುಂದಿನಂತೆ ಪ್ರಕಟಿಸಲಾಗಿದೆ.

ಉಲ್ಲೇಖಿತ ಅಧಿಸೂಚನೆಗಳಲ್ಲಿ ನಿಗಧಿಪಡಿಸಿದ ನಿಬಂಧನೆಗಳಿಗೆ ಅನುಗುಣವಾಗಿ ಆಯ್ಕೆಗೆ ಅರ್ಹವಾಗಿರದ ಅರ್ಜಿದಾರರುಗಳ ಪಟ್ಟಿಯನ್ನು ಕೂಡ ಅನರ್ಹತೆಗೆ ಕಾರಣ ಸಹಿತವಾಗಿ ಪ್ರತ್ಯೇಕ ಪಟ್ಟಿಯನ್ನು ಹೊರಡಿಸಲಾಗಿದೆ.

ಪ್ರಸ್ತುತ ಪ್ರಕಟಪಡಿಸಿರುವ ತಾತ್ಕಾಲಿಕ ಆಯ್ಕೆ ಪಟ್ಟಿ ಹಾಗೂ ಕಾಯ್ದಿರಿಸಿದ ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ಯಾವುದೇ ಆಕ್ಷೇಪಣೆಗಳಿದ್ದಲ್ಲಿ ನಿರ್ದಿಷ್ಟವಾದ ಕಾರಣ ಮತ್ತು ದಾಖಲೆಗಳ ಸಹಿತ ಈ ಮುಂದೆ ಹೇಳಲಾದ ನಮೂನೆಯಲ್ಲಿ ಆಕ್ಷೇಪಣೆಗಳನ್ನು ಮಂಡ್ಯ ಜಿಲ್ಲಾಧಿಕಾರಿಗಳ ಕಛೇರಿಯ ಮೊದಲನೇ ಮಹಡಿ, ಕೊಠಡಿ ಸಂಖ್ಯೆ: 30 ರಲ್ಲಿ ಖುದ್ದಾಗಿಯಾಗಲೀ ಅಥವಾ ಅಂಚೆ ಮೂಲಕವಾಗಲಿ ದಿನಾಂಕ: 30.11.2009 ರಿಂದ ದಿನಾಂಕ: 14.12.2009 ರ ಮಧ್ಯಾಹ್ನ 3.00 ಗಂಟೆಯ ಒಳಗಾಗಿ ಸಲ್ಲಿಸತಕ್ಕದ್ದು. ಈ ನಿಗಧಿತ ದಿನಾಂಕ ಮತ್ತು ವೇಳೆಯ ನಂತರ ಬರುವಂತಹ ಆಕ್ಷೇಪಣೆಗಳನ್ನು ಸ್ವೀಕರಿಸಲಾಗುವುದಿಲ್ಲವೆಂದು ಹಾಗೂ ಅಂಚೆ ವಿಳಂಬಕ್ಕೆ ಜಿಲ್ಲಾಧಿಕಾರಿಗಳವರ ಕಛೇರಿ ಜವಾಬ್ದಾರಿಯಾಗುವುದಿಲ್ಲವೆಂದು ಈ ಮೂಲಕ ತಿಳಿಯ ಪಡಿಸಿದೆ.

ಆಕ್ಷೇಪಣೆಗಳನ್ನು ಸಲ್ಲಿಸುವವರು ಕಡ್ಡಾಯವಾಗಿ ತಮ್ಮ ಅರ್ಜಿಗಳ Reference ಸಂಖ್ಯೆಗಳನ್ನು ನಮೂದಿಸತಕ್ಕದ್ದು ಆಕ್ಷೇಪಣಾ ಅರ್ಜಿಯಲ್ಲಿ ನಿಖರವಾದ ಮಾಹಿತಿಯಿರದಿದ್ದಲ್ಲಿ ಅಂತಹಾ ಆಕ್ಷೇಪಣಾ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ಆಕ್ಷೇಪಣೆಗೆ ಸಲ್ಲಿಸಬೇಕಾಗಿರುವ ಅರ್ಜಿ ನಮೂನೆಯನ್ನು http:// mandya.Nic.in ರ ಅಂತರ್ಜಾಲ ತಾಣದಲ್ಲಿ Download ಮಾಡಿಕೊಂಡು ಇಲ್ಲವೆ ಅದೇ ನಮೂನೆಯಲ್ಲಿ ಸ್ಪಷ್ಟವಾಗಿ ಬರೆದು ಸಲ್ಲಿಸತಕ್ಕದ್ದು.

ಸದರಿ ಆಯ್ಕೆ ಪಟ್ಟಿಗಳಲ್ಲಿನ ಅಭ್ಯರ್ಥಿಗಳು ದಿನಾಂಕ: 15.12.2009 ರಂದು 10.00 ಗಂಟೆಗೆ, ಹುದ್ದೆಗೆ ನಿಗಧಿಪಡಿಸಿರುವ ವಿದ್ಯಾರ್ಹತೆ/ಮೀಸಲಾತಿ ಕೋರಿರುವ ಮೂಲ ದಾಖಲೆ ಜೊತೆಯಲ್ಲಿ ಒಂದು Xerox ಪ್ರತಿಯನ್ನು ಗೆಜೆಟೆಡ್ ಅಧಿಕಾರಿಗಳಿಂದ ದೃಢೀಕರಿಸಿ ಪರಿಶೀಲನಾ ಸಮಯದಲ್ಲಿ ಖುದ್ದಾಗಿ ಹಾಜರುಪಡಿಸತಕ್ಕದ್ದು.

-2)

## ಆಕ್ಷೇಪಣಾ ಅರ್ಜಿಗಳ ಸಲ್ಲಿಕೆಯ - ನಮೂನೆ

| | |
|---|---|
| ಅಭ್ಯರ್ಥಿ ಹೆಸರು ಮತ್ತು ಅಂಚೆ ವಿಳಾಸ | |
| Online | |
| Offline | |
| Refrence number | |
| ಆಕ್ಷೇಪಣೆಯ ಸಂಕ್ಷಿಪ್ತ ವಿವರ | |
| ಆಕ್ಷೇಪಣೆಗೆ ಪೂರಕವಾದ ದಾಖಲೆಗಳು | |

ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ಮತ್ತು ಕಾಯ್ದಿರಿಸಿದ ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ಹೇಳಲಾದ ಅಭ್ಯರ್ಥಿಗಳ ಪೈಕಿ Online ನಲ್ಲಿ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು ಪರಿಶೀಲನೆಗೆ ನಿಗಧಿಪಡಿಸಿರುವ ದಿನಾಂಕದಂದು ಈ ಮುಂದೆ ಹೇಳಲಾಗಿರುವ ದಾಖಲಾತಿಗಳನ್ನು ಖುದ್ದಾಗಿ ಹಾಜರು ಪಡಿಸತಕ್ಕದ್ದು.

1. ಅಭ್ಯರ್ಥಿಯ ಭಾವ ಚಿತ್ರವಿರುವ ದೃಡೀಕೃತ/ಅಧಿಕೃತ ಗುರುತಿನ ಚೀಟಿ.
2. ಅರ್ಜಿಯನ್ನು ಸಲ್ಲಿಸಿರುವ ಬಗ್ಗೆ ಹೊಂದಿರುವ Refrence ಸಂಖ್ಯೆಯ ವಿವರ
3. ನಿಗಧಿತ ಶುಲ್ಕವನ್ನು ಬ್ಯಾಂಕಿನಲ್ಲಿ ಪಾವತಿ ಮಾಡಿರುವ ಬಗ್ಗೆ ಮೂಲ ಚಲನ್ ಪ್ರತಿ.
4. ಅಭ್ಯರ್ಥಿಯ ಇತ್ತೀಚಿನ ಭಾವಚಿತ್ರ(passport size)- 2

ವಿಶೇಷ ಸೂಚನೆ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಅಂತಿಮ ಆಯ್ಕೆ ಪಟ್ಟಿಯೆಂದು ಪರಿಗಣಿಸುವಂತಿಲ್ಲ ಮತ್ತು ಸದರಿ ಪಟ್ಟಿಯಲ್ಲಿ ಹೆಸರುಗಳನ್ನು ನಮೂದಿಸಿರುವ ಮಾತ್ರಕ್ಕೆ ಆಯ್ಕೆ ಪಡೆಯುವ ಹಕ್ಕುಳ್ಳವರಾಗಿರುವುದಿಲ್ಲ. ದಾಖಲಾತಿಗಳ ಪರಿಶೀಲನಾನಂತರ ಅಂತಿಮ ಆಯ್ಕೆ ಪಟ್ಟಿಯನ್ನು ದಿನಾಂಕಃ 19-12-2009 ರಂದು ಪ್ರಕಟಿಸಲಾಗುವುದು.

ಅಧ್ಯಕ್ಷರು,
ಆಯ್ಕೆ ಮತ್ತು ನೇಮಕಾತಿ ಪ್ರಾಧಿಕಾರಿ,
ಹಾಗೂ ಜಿಲ್ಲಾಧಿಕಾರಿ, ಮಂಡ್ಯಜಿಲ್ಲೆ, ಮಂಡ್ಯ.